# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 12.07.2010**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಜಯನಗರ ವಾರ್ಡ್ 123ರಲ್ಲಿ ದಿನಾಂಕ: 09.07.2010 ರಂದು ಸಾಯಂಕಾಲ 6.00 ಗಂಟೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಕಾರ್ಯಕ್ರಮವನ್ನು ಪೂಜ್ಯ ಮಹಾಪೌರರಾದ ಶ್ರೀ ಎಸ್.ಕೆ. ನಟರಾಜ್ ರವರು ನೆರವೇರಿಸಿದರು.

ಗಾಂಧಿನಗರ ಆಟದ ಮೈದಾನದಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ ಸಾರ್ವಜನಿಕ ಶೌಚಾಲಯ, ವಿಜಯನಗರ ಮಾಗಡಿ ಮುಖ್ಯರಸ್ತೆಯಿಂದ ಪಾದರಾಯನಪುರ ಮುಖ್ಯರಸ್ತೆವರೆಗೆ ರೂ. 50 ಲಕ್ಷ ವೆಚ್ಚದಲ್ಲಿ ರಸ್ತೆ ಬದಿ ಮೋರಿ ನಿರ್ಮಾಣ, ಚೋಳೂರುಪಾಳ್ಯ ಮುಖ್ಯರಸ್ತೆಯಿಂದ 15ನೇ ಮುಖ್ಯರಸ್ತೆವರೆಗೆ ರಸ್ತೆ ಬದಿ ಮೋರಿ ನಿರ್ಮಾಣ ಕಾಮಗಾರಿ ರೂ. 20 ಲಕ್ಷ ವೆಚ್ಚದಲ್ಲಿ ಹಾಗೂ ವಿಜಯನಗರ ಮೊದಲನೇ ಮುಖ್ಯರಸ್ತೆಯಲ್ಲಿ ವಿವಿದೊದ್ಧೇಶ ಕಟ್ಟಡದ ನಿರ್ಮಾಣ ಕಾಮಗಾರಿ ರೂ. 25 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮಾಡಲಾಯಿತು.

ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಹೆಚ್. ರವೀಂದ್ರ ರವರು ಪ್ರಾಸ್ತಾವಿಕ ಭಾಷಣ ಮಾಡಿ, ವಿಜಯನಗರ ವಾರ್ಡ್ ಸರ್ವತೋಮುಖ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದು ಮತ್ತು ಇಂದು ಪಾಲಿಕೆ ಸದಸ್ಯರ ಸಾರ್ವಜನಿಕ ಸಂಪರ್ಕ ಕಛೇರಿಯ ಉದ್ಘಾಟನೆ ಮಾಡಲಾಗಿದೆ. ಸಾರ್ವಜನಿಕರು ಯಾವುದೇ ಸಮಯದಲ್ಲಿ ಇಲ್ಲಿಗೆ ಬಂದು ತಮ್ಮ ಮನವಿಯನ್ನು ಸಲ್ಲಿಸಬಹುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ ಆರ್. ಅಶೋಕ್, ಮಾನ್ಯ ಸಾರಿಗೆ ಮತ್ತು ನಾಗರಿಕ ಸರಬರಾಜು ಸಚಿವರು, ಶ್ರೀ ಅನಂತಕುಮಾರ್, ಸಂಸತ್ ಸದಸ್ಯರು, ಶ್ರೀ ಸೋಮಣ್ಣ, ವಿಧಾನ ಪರಿಷತ್ ಸದಸ್ಯರು, ಉಪ ಮಹಾಪೌರರಾದ ಶ್ರೀ ಎನ್. ದಯಾನಂದ್, ಶ್ರೀ ಗಂಗಭೈರಯ್ಯ, ಪಾಲಿಕೆ ಸದಸ್ಯರು, ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**